## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,  ಮೈಸೂರು.

## Spl.C. 143/2020

**P.W.-5**
**C.W.-20**

ಹೆಸರು : ಉಮೇಶ್ ಜಿ ಶೇಟ್

ತಂದೆಯ ಹೆಸರು : ಗಣಪತಿ ಶೇಟ್

ವಯಸ್ಸು : 66 ವರ್ಷ

ಉದ್ಯೋಗ : ನಿವೃತ್ತ ಪೋಲೀಸ್ ಉಪಾಧೀಕ್ಷಕರು

ವಾಸಸ್ಥಳ : ಮೈಸೂರು

**ದಿನಾಂಕಃ 13.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ ಃ –**

ದಿ.13.03.2018 ರಿಂದ 30.04.2019 ರವರೆಗೆ ಮೈಸೂರು ಭ್ರಷ್ಟಾಚಾರ ನಿಗ್ರಹ ದಳದಲ್ಲಿ ಪೋಲಿಸ್ ಉಪಾಧೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

2. ದಿ.05.09.2018 ರಂದು ನಾನು ಕಚೇರಿಯಲ್ಲಿದ್ದಾಗ ಈ ಪ್ರಕರಣದ ಚಾಸಾ.1 ರವರು ಠಾಣೆಗೆ ಹಾಜರಾಗಿ ನೀಡಿದ ಬೆರಳಚ್ಚು ಮಾಡಿದ ದೂರನ್ನು ಹೊಂದಿಕೊಂಡು ನಮ್ಮ ಠಾಣಾ ಮೊಕದ್ದಮೆ ಸಂಖ್ಯೆ 7/18 ರಂತೆ ಕಲಂ 7(ಎ) ಪಿಸಿ ಆಕ್ಟ್ ರ ಅಡಿಯಲ್ಲಿ ಮೊಕದ್ದಮೆಯನ್ನು ದಾಖಲಿಸಿ ಪ್ರ.ವ.ವ. ವನ್ನು ನ್ಯಾಯಾಲಯಕ್ಕೂ , ನನ್ನ ಮೇಲಧಿಕಾರಿಗಳಿಗೂ ಕಳುಹಿಸಿಕೊಟ್ಟಿರುತ್ತೇನೆ. ಸದರಿ ದೂರನ್ನು ಈಗ ನೋಡುತ್ತಿದ್ದೇನೆ. ಅದರ ಮೇಲೆ ನನ್ನ ಬರವಣಿಗೆಯ ಹಿಂಬರಹ ಮತ್ತು ಸಹಿ ಇರುತ್ತದೆ. ಸದರಿ ದೂರನ್ನು ಈಗಾಗಲೇ ನಿಪಿ.1 ಎಂದು ಗುರುಪಡಿಸಿಕೊಳ್ಳಲಾಗಿದ್ದು , ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಬರವಣಿಗೆ

ಮತ್ತು ಸಹಿಯನ್ನು ನಿಪಿ.1(ಬಿ) ಎಂದು ಗುರುತುಪಡಿಸಿಕೊಳ್ಳಲಾಯಿತು. ಪ್ರ.ವ.ವ. ವನ್ನು ಈಗ ನಿಪಿ.24 ಎಂತಲೂ, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ.24(ಎ) ಎಂತಲೂ ಗುರುತುಪಡಿಸಿಕೊಳ್ಳಲಾಯಿತು.

3. ದೂರಿನ ಸಂಕ್ಷಿಪ್ತ ಸಾರಾಂಶವೇನೆಂದರೆ , ದೂರುದಾರರು ಬೆಲವತ್ತಾ ಗ್ರಾಮದ ಮನೆ ನಂಬರ್ 364 ರ ನಿವಾಸಿಯಾಗಿದ್ದು , ಆಕೆ ಅದೇ ಗ್ರಾಮದ ಸರ್ವೇ ನಂಬರ್ 93/29 ರಲ್ಲಿ 15x55 ನಿವೇಶನವನ್ನು ಹೊಂದಿದ್ದು , ಅದರಲ್ಲಿ 15x30 ಅಡಿ ನಿವೇಶವನದಲ್ಲಿ ಮನೆಯನ್ನು ಕಟ್ಟಿದ್ದು , ಉಳಿದ ನಿವೇಶನ ಖಾಲಿ ಇದ್ದು , ಸದರಿ ಮನೆಗೆ ಪಂಚಾಯಿತಿಯಿಂದ ನಮೂನೆ 11 ಬಿ ಖಾತೆಯನ್ನು ಪಡೆದುಕೊಳ್ಳಲು , ಸಿದ್ದಲಿಂಗಪುರ ಗ್ರಾಮ ಪಂಚಾಯಿತಿಗೆ ಸುಮಾರು 6 ತಿಂಗಳ ಹಿಂದೆ ಅರ್ಜಿಯನ್ನು ಸಲ್ಲಿಸಿದ್ದು , ಈ ಬಗ್ಗೆ ಖಾತೆ ಮಾಡಿಕೊಳ್ಳಲು , 2-3 ಬಾರಿ ದೂರುದಾರಳು ಗ್ರಾಮ ಪಂಚಾಯಿತಿ ಭೇಟಿ ಮಾಡಿ , ಈ ಬಗ್ಗೆ ವಿಚಾರಿಸಿದಾಗ ಸದರಿ ಪಂಚಾಯಿತಿಯ ನೌಕರನಾದ ನಿಂಗರಾಜು ಎಂಬುವವರು ಈ ಬಗ್ಗೆ ನೀವು ಪಂಚಾಯಿತಿ ಯ ಕಾರ್ಯದರ್ಶಿಯಾದ ಮಾರಪ್ಪ ರವರನ್ನು ಭೇಟಿಯಾಗಲು ತಿಳಿಸಿದರು. ಅದರಂತೆ ಸದರಿಯವರನ್ನು ಭೇಟಿ ಮಾಡಲು ಸದರಿ ಗ್ರಾಮ ಪಂಚಾಯತಿ ಕಚೇರಿಗೆ 2-3 ಬಾರಿ ಹೋದರು , ಕಾರ್ಯದರ್ಶಿ ಸಿಕ್ಕಿರುವುದಿಲ್ಲ.

4. ದಿ.04.09.2018 ರಂದು ದೂರುದಾರರು ಪುನಃ ಸಿದ್ದಲಿಂಗಪುರ ಗ್ರಾಮ ಪಂಚಾಯಿತಿ ಕಚೇರಿಗೆ ಭೇಟಿ ಮಾಡಿ ಕಾರ್ಯದರ್ಶಿ ಮಾರಪ್ಪ ರವರ ಬಗ್ಗೆ ವಿಚಾರಿಸಲಾಗಿ , ಅವರು ಕಚೇರಿಯಲ್ಲಿ ಇಲ್ಲದೇ ಇರುವುದರಿಂದ ಅವರ ಮೊಬೈಲ್ ನಂಬರ್ ನ್ನು ಸದರಿ ಕಚೇರಿಯ ಸಿಬ್ಬಂದಿಯಿಂದ ಪಡೆದುಕೊಂಡು , ದೂರುದಾರಳು ತನ್ನ ಮೊಬೈಲ್ ನಿಂದ ಆ ಕಾರ್ಯದರ್ಶಿಯ ಮೊಬೈಲ್ ಪೋನ್ ಮಾಡಲಾಗಿ , ಕಾರ್ಯದರ್ಶಿಯವರು ತಾನು ಬೆಲವತ್ತಾ ಗ್ರಾವದಲ್ಲಿ ಇದ್ದೇನೆ , ನೀವು ಈ ಕೂಡಲೇ ವಾಪಾಸ್ಸು ನಿಮ್ಮ ಮನೆಗೆ ಬನ್ನಿ ಎಂದು ತಿಳಿಸಿ , ನಮ್ಮ ಮನೆಯ ವಿಳಾಸವನ್ನು ತಿಳಿದುಕೊಂಡರು.

ದೂರುದಾರರು ಅವರ ಮನೆಗೆ ಹೋದರು . ಅದೇ ದಿನ ಮದ್ಯಾಹ್ನ ಸುಮಾರು 2 ಗಂಟೆಗೆ ಕಾರ್ಯದರ್ಶಿ ಮಾರಪ್ಪ ದೂರುದಾರರ ಮನೆಗೆ ಬಂದು , ತಾನು ಮಾರಪ್ಪ , ಗ್ರಾಮ ಪಂಚಾಯಿತಿಯ ಕಾರ್ಯದರ್ಶಿ ಬಂದು ತನ್ನುನ್ನು ಪರಿಚಯಿಸಿಕೊಂಡಾಗ ದೂರುದಾರರು ತಾನು 11 ಬಿ ಖಾತೆಗೆ ಅರ್ಜಿ ಸಲ್ಲಿಸಿದ್ದ ಬಗ್ಗೆ ತಿಳಿಸಿದಾಗ, ಆಗ ಆರೋಪಿ ಮಾರಪ್ಪ ಈ ಖಾತೆ ಮಾಡಿಕೊಡಲು 15 ಸಾವಿರ ರೂ. ಹಣ ಕೊಡಬೇಕಾಗಿರುತ್ತದೆ  ಎಂದು ತಿಳಿಸಿದರು. ಆಗ ದೂರುದಾರಳು  ಆ ಹಣಕ್ಕೆ ರಶೀದಿಯನ್ನು ಕೊಡುತ್ತೀರಾ ಎಂದು ಕೇಳಿದ್ದು , ಅದಕ್ಕೆ ಆರೋಪಿ ರಶೀದಿ ಕೊಡಲು ಆಗುವುದಿಲ್ಲ, ಆ ಹಣವನ್ನು ಗ್ರಾಮ ಪಂಚಾಯಿತಿಯವರಿಗೆ ಕೊಡಬೇಕಾಗುತ್ತದೆ ಎಂದು ತಿಳಿಸಿದನು. ಆಗ  ದೂರುದಾರಳು ನಾನು ಬಡವಳಿದ್ದೇನೆ , ಅಷ್ಟು ಹಣವನ್ನು ನನ್ನಿಂದ ಕೊಡಲು ಅಗುವುದಿಲ್ಲ ಎಂದು ಹೇಳಿದಾಗ, ಆರೋಪಿ ಕೊನೆಗೆ 12 ಸಾವಿರ ರೂ. ಗಳನ್ನಾದರೂ ಕೊಡಿ ಎಂದು ಕೇಳಿದ್ದು, ದೂರುದಾರಳು ಈ ಬಾಬ್ತು ಕಚೇರಿಗೆ ಬರಬೇಕಾ ಎಂದು ಕೇಳಿದಾಗ , ಆರೋಪಿ , ನಾಳೆ ಆ ಬಗ್ಗೆ ಫೋನ್ ಮಾಡಿ ವಿಷಯ ತಿಳಿಸುತ್ತೇನೆ ಎಂದು ತಿಳಿಸಿರುತ್ತಾನೆ.  ಈ ಸಂಭಾಷಣೆಯನ್ನು  ದೂರುದಾರಳು ತನ್ನ ಮೊಬೈಲ್ ಫೋನ್ ನಲ್ಲಿ  ರೆಕಾರ್ಡ್ ಮಾಡಿಕೊಂಡಿರುತ್ತಾರೆ. ದೂರುದಾರಳಿಗೆ ಲಂಚದ ಹಣವನ್ನು ಕೊಟ್ಟು ಸ್ವತ್ತಿನ ಖಾತೆ ಮಾಡಿಕೊಳ್ಳಲು ಇಷ್ಟ ವಿಲ್ಲದೇ ಇದುದರಿಂದ , ನಮ್ಮ ಕಚೇರಿಗೆ ಬಂದು , ಕಾನೂನಿನ ರೀತ್ಯಾ  ಕ್ರಮವನ್ನು ಕೈಗೊಳ್ಳಲು ದೂರನ್ನು ನೀಡಿರುತ್ತಾರೆ.

5. ದೂರಿನೊಂದಿಗೆ ದೂರುದಾರಳು ಒಟ್ಟು ರೂ.12,000/- ನಗದು ಹಣ ಮತ್ತು ಆಕೆಯ ಮೊಬೈಲ್ ನ ಮೆಮೊರಿ ಕಾರ್ಡ್ ನ್ನು ಸಹ ನ್ನ ಮುಂದೆ ಹಾಜರುಪಡಿಸಿರುತ್ತಾರೆ.

6. ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ.23 ರವರಿಗೆ ಹಸ್ತಾಂತರಿಸುತ್ತೇನೆ. ಈ ಬಗ್ಗೆ  ಜ್ಞಾಪನಾ ವನ್ನು ನೋಡುತ್ತಿದ್ದೇನೆ. ಅದನ್ನು ಈಗ ನಿಪಿ.25  ಎಂತಲೂ , ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ.25(ಎ) ಎಂತಲೂ ಗುರುತುಪಡಿಸಿಕೊಳ್ಳಲಾಯಿತು.

**ಪಾಟೀಸವಾಲುಃ ಆರೋಪಿಗಳ ಪರ ಶ್ರೀ. ವಕೀಲರಿಂದಃ –**

7. ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪಾಧೀಕ್ಷಕರು ಮತ್ತು ಅದಕ್ಕಿಂತ ಉನ್ನತ ಅಧಿಕಾರಿಗಳು ಮಾತ್ರವೇ ಠಾಣಾಧಿಕಾರಿಗಳಾಗಿರುತ್ತಾರೆ ಎನ್ನುವುದು ಸರಿ. ಭ್ರಷ್ಟಾಚಾರ ನಿಗ್ರಹ ದಳ ಪೋಲೀಸ್ ಠಾಣೆಯಲ್ಲಿ ಪೋಲೀಸ್ ನಿರೀಕ್ಷಕರಿಗೆ ಠಾಣಾಧಿಕಾರಿಯಾಗಿರಲು ಅಧಿಕಾರ ಇರುವುದಿಲ್ಲ ಎಂದು ಮಾಡಿದ ಸಲಹೆಗೆ ಸಾಕ್ಷಿ , ನಮ್ಮ ಗೈರು ಹಾಜರಾತಿಯಲ್ಲಿ ಅವರು ಠಾಣಾಧಿಕಾರಿಯಾಗಿರುತ್ತಾರೆ , ಎನ್ನುತ್ತಾರೆ. ಈ ಬಗ್ಗೆ ಸರ್ಕಾರದ ಸುತ್ತೋಲೆ ಇರುತ್ತದೋ ಇಲ್ಲವೋ ಎನ್ನುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಪೋಲೀಸ್ ಉಪಾಧೀಕ್ಷಕರು , ಪೊಲೀಸ್ ನಿರೀಕ್ಷಕರಿಗೆ ತನಿಖೆಯನ್ನು ನಡೆಸಲು ಕಡತವನ್ನು ಹಸ್ತಾರಿಸುವ ಬಗ್ಗೆ ಸರ್ಕಾರದ ಸುತ್ತೋಲೆ ಇರುತ್ತದೆ ಇಲ್ಲವೋ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿ ಸ್ವತಃ ನುಡಿಯುತಾರೇ ಪೋಲೀಸ್ ಉಪಾಧೀಕ್ಷಾಕನಾಗಿ , ಪೊಲೀಸ್ ನಿರೀಕ್ಷಕರಿಗೆ ತನಿಖೆಯನ್ನು ನಡೆಸಲು ನಿರ್ದೇಶಿಸುವ ಅಧಿಕಾರವನ್ನು ಹೊಂದಿರುತ್ತೇನೆ ಎಂದು. ಈ ಬಗ್ಗೆ ಕಾನೂನಿನಲ್ಲಿ ನನಗೆ ಅಧಿಕಾರ ಇರುವುದಿಲ್ಲ ಎನ್ನುವುದು ಸರಿಯಲ್ಲ.

8. ನಿಪಿ.25 ರಲ್ಲಿ ಪೊಲೀಸ್ ನಿರೀಕ್ಷಕರಾದ ಜಿ ಶೇಖರ್ ರವರ ಅನುಭವ ಮತ್ತು ಅವರ ಸಾಮರ್ಥ್ಯ ದ ಬಗ್ಗೆ ನಮೂದಿಸಿರುವುದಿಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ , ಅಕ್ರಮ ಆಸ್ತಿ ಗಳಿಕೆ ಪ್ರಕರಣದಗಳಲ್ಲಿ ತನಿಖೆಗಾಗಿ ಪೊಲೀಸ್ ಅಧೀಕ್ಷಕರು ತನಿಖೆಗಾಗಿ ಸೂಕ್ತ ಆದೇಶವನ್ನು ಹೊರಡಿಸುತ್ತಾರೆ. . ಆದರೆ ಲಂಚದ ದಾಳಿ ಪ್ರಕರಣಗಳಲ್ಲಿ ಅಂತಹ ಆದೇಶವನ್ನು ಹೊರಡಿಸುವುದಿಲ್ಲ , ಎನ್ನುತ್ತಾರೆ. ಠಾಣಾಧಿಕಾರಿಯ ಹುದ್ದೆ ಗಿಂತ ಅಧೀನ ಅಧಿಕಾರಿಗಳು ತನಿಖೆ ಮಾಡಲು ವಿಶೇಷ ಆದೇಶ ಬೇಕಾಗಿರುತ್ತದೆ ಎನ್ನುವುದು ಸರಿಯಲ್ಲ.

9. ನಿಪಿ.25 ರಲ್ಲಿ ನಾನು ಯಾವ ಪ್ರಕರಣಗಳ ಬಾಬ್ತು ಕರ್ತವ್ಯದ ಒತ್ತಡದಲ್ಲಿದ್ದೆ ಎಂದು ನಮೂದಿಸಿರುವುದಿಲ್ಲ ಎನ್ನುವುದು ಸರಿ.

10. ದೂರಿನ ಸಾರಾಂಶವನ್ನು ನಾನು ಈಗ ನ್ಯಾಯಾಲಯದ ಮಂದೆ ನಿಪಿ.1 ನ್ನು ಓದಿ ನೋಡಿಕೊಂಡು ಹೇಳಿರುತ್ತೇನೆ ಎನ್ನುವುದು ಸರಿಯಲ್ಲ. ನಿಪಿ.1 ದೂರನ್ನು ನಮ್ಮ ಠಾಣೆಯಲ್ಲಿ ನಾವೇ ಟೈಪ್ ಮಾಡಿಸಿರುದರಿಂದ ಅದನ್ನು ನೋಡದೇ ಹೇಳಿರುತ್ತೇನೆ ಎನ್ನುವುದು ಸರಿಯಲ್ಲ.

11. ದೂರಿನೊಂದಿಗೆ ನಗದು ಹಣ ಮತ್ತು ಮೊಬೈಲ್ ಮೆಮೋರಿ ಕಾರ್ಡ್ ನು ಹೊರತುಪಡಿಸಿ ಬೇರೆ ಯಾವುದೇ ದಾಖಲಾತಿಗಳನ್ನು ಸಹ ಹಾಜರುಪಡಿಸಿರುವುದಿಲ್ಲ. ದೂರಿನ ಬಗ್ಗೆ ಪ್ರಾಥಮಿಕ ತನಿಖೆಯನೇನು ನಾನು ಕೈಗೊಂಡಿರುವುದಿಲ್ಲ. ಮೊಬೈಲ್ ಕ್ಯಾಮಾರಾದಲ್ಲಿ ಸಂಭಾಷಣೆಯನ್ನು ದಾಖಲಿಸಿಕೊಳ್ಳುವಲ್ಲಿ ವ್ಯಕ್ತಿಗಳು ಸಹ ಕಂಡು ಬರುತ್ತಾರೆ ಎನ್ನುವುದು ಸರಿ. ದೂರಿನಲ್ಲಿ ಇದ್ದಂತಹ ವಿಷಯಗಳನ್ನು ಪರಿಶೀಲಿಸಿದಾಗ ಅದು ಒಂದು ಸುಳ್ಳು ದೂರು ಎನ್ನುವುದು ಕಂಡು ಬಂದಿದ್ದರು ಸಹ ನಾನು ಆರೋಪಿಯ ವಿರುದ್ದ ಸುಳ್ಳು ಮೊಕ್ದಮೆಯನ್ನು ದಾಖಲಿಸಿರುತ್ತೇನೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು,
ಮೈಸೂರು.